ಆದರೆ ಪದೋನ್ನತಿಯ ಕಾರಣದಿಂದ ಉತ್ತರ ಭಾರತದ ಕಡೆ ವರ್ಗವಾಗಿ ಹೋಗಬೇಕಾಯಿತು. ಮತ್ತೆ ಮರಳಿದ್ದು ಆರು ವರ್ಷಗಳ ಬಳಿಕವೇ. ಬೆಂಗಳೂರಿನವರೆಗೆ ಬಂದೆ. ಊರಿಗೆ ಹೋದಾಗ ಒಮ್ಮೆ ಸಿರಿಪುರಕ್ಕೆ ಹೋಗಿ ಬರಬೇಕು ಎಂದುಕೊಂಡಿದ್ದೆನಾದರೂ ರಜೆಯನ್ನು ಹೊಂದಿಸಲಾಗದೆ ಅದು ಸಾಧ್ಯವಾಗಲಿಲ್ಲ. ಆದರೆ ಒಮ್ಮೆ ಊರಿನಿಂದ ಬೆಂಗಳೂರಿಗೆ ತೆರಳುವಾಗ ಶಿವಮೊಗ್ಗಾದ ಬಸ್‌ನಿಲ್ದಾಣದಲ್ಲಿ ರಾಮಣ್ಣನ ಭೇಟಿಯಾಯಿತು. ತುಂಬಾ ಇಳಿದು ಹೋಗಿದ್ದ. ತಟ್ಟನೆ ಗುರುತೇ ಸಿಗದಷ್ಟು. ಏನು ರಾಮಣ್ಣ ಏನಾಯಿತು, ಆರೋಗ್ಯ ಸರಿಯಿರಲಿಲ್ಲವಾ ಎಂದು ಕೇಳಿದೆ. ಜೀವವನ್ನೆ ಕಳೆದುಕೊಂಡಂತಿದ್ದ ಆತನ ಶುಷ್ಕ ದ್ರವರಹಿತ ಕಣ್ಣುಗಳು ಪ್ರತಿಫಲಿಸಿದ ಅನಾಥ ಪ್ರಜ್ಞೆಗೆ ಕರುಳು ಚುರಕ್ ಎಂದಿತು. 'ಬದುಕಲ್ಲಿ ಮಕ್ಕಳನ್ನು ಪಡೆಯೋದಕ್ಕೆ, ಉಳಿಸಿಕೊಳ್ಳೋದಕ್ಕೆ ಯೋಗ ಬೇಕು ಭಾರ್ಗು, ನನಗದಿಲ್ಲ' ಎಂದು ದಾರ್ಶನಿಕನಂತೆ ಮಾತಾಡಿದ. ಹೊಟೇಲೊಂದಕ್ಕೆ ಕರೆದುಕೊಂಡು ಹೋಗಿ ಚಹಾ–ತಿಂಡಿ ಕೊಡಿಸಿದೆ. ನನ್ನ ಭೇಟಿಯನ್ನಾತ ನಿರೀಕ್ಷಿಸಿರಲಿಲ್ಲ ಮತ್ತು ಅಪೇಕ್ಷಿಸಿರಲೂ ಇಲ್ಲ ಎನ್ನುವುದನ್ನು ಅವನ ಮುಖಭಾವದಿಂದಲೇ ಅರ್ಥ ಮಾಡಿಕೊಂಡೆನಾದರೂ ಅದಕ್ಕೆಲ್ಲ ಕಾರಣ ಆತ ಜೀವನದಲ್ಲಿ ಅನುಭವಿಸಿದ ನೋವೇ ಎನ್ನುವುದೂ ಅರ್ಥವಾಗಿ ಯಾಕೋ ಒಂದು ರೀತಿಯ ಅಪರಾಧೀ ಪ್ರಜ್ಞೆ ಕಾಡಿತು. ಕಳೆದ ಘಟನೆಗಳನ್ನು, ತನಗದು ಸಂಬಂಧಿಸಿದ್ದೇ ಅಲ್ಲ ಯಾರದ್ದೋ ಅನ್ನುವಂತೆ ಆತ ಬಿಚ್ಚಿಟ್ಟ. ಗೋಪಾಲನಿಗೆ ಮದುವೆ ಮಾಡಿದ್ದು, ಆತ ಹೆಂಡತಿ ಬಂದ ನಂತರ ಬದಲಾದದ್ದು, ತಮ್ಮನ್ನು ದೂರಮಾಡಿ ಬೇರೆ ಮನೆ ಮಾಡಿದ್ದು, ಹೊಟ್ಟೆ ಪಾಡಿಗಾಗಿ ತಾವು ಸಿರಿಪುರದ ಮನೆ ಮಾರಿ ಶಿವಮೊಗ್ಗಕ್ಕೆ ಬಂದು, ಒಂದು ಸಣ್ಣ ಹೊಟೇಲಿನಲ್ಲಿ ಅಡುಗೆ ಉಸ್ತುವಾರಿ ನೋಡಿಕೊಳ್ಳುತ್ತಿರುವುದು... 'ಅಕ್ಕ ಹೇಗಿದ್ದಾಳೆ?' ಎಂದೆ. 'ತಾಯಿಯ ಹೃದಯಕ್ಕೆ ಭಾರ ಹೊರುವುದಕ್ಕೂ ಒಂದು ಮಿತಿ ಅಂತ ಇರುತ್ತದೆ ಭಾರ್ಗು. ಅವಳ ಹೃದಯಕ್ಕೆ ಭಾರ ಜಾಸ್ತಿಯಾಯಿತು' ಎಂದು ಮೇಲೆ ಕೈ ತೋರಿಸಿದ. ನನ್ನ ಕಣ್ಣೀರು ಅವನಿಗೆ ಕಾಣಿಸಬಾರದೆಂದು ತಲೆ ಕೆಳಗೆ ಹಾಕಿದೆ. ತುಸು ಹೊತ್ತುಬಿಟ್ಟು 'ನನ್ನೊಡನೆ ಬಂದುಬಿಡುತ್ತೀಯ ರಾಮಣ್ಣ, ನನ್ನ ಮನೆಯಲ್ಲಿಯೇ ಇರಬಹುದು...' ಎಂದು ಕೇಳಿದೆ. 'ನಿನ್ನ ನೆನಪೊಂದು ನನ್ನ ಜೊತೆಗೆ, ನನ್ನ ನೆನಪೊಂದು ನಿನ್ನ ಜೊತೆ ಇದ್ದರೆ ಅಷ್ಟೇ ಸಾಕು ಭಾರ್ಗು. ನಮ್ಮಂಥವರು ಕನಸಲ್ಲಿ ಮಾತ್ರ ಸುಂದರ ಬದುಕನ್ನ ಕಾಣಬೇಕು ಎನ್ನುವುದು ನನಗೆ ಅರ್ಥವಾಗಿದೆ, ನನ್ನನ್ನ ಒತ್ತಾಯಿಸಬೇಡ' ಎಂದ.

ಅವನ ಕೈಗಷ್ಟು ದುಡ್ಡನ್ನು ಒತ್ತಾಯದಿಂದ ತುರುಕಿ ಹೊರಡುವಾಗ ಹೇಳಿದ 'ನೀನು ಮಾತ್ರ ನನ್ನ ಮಗನೇ ಭಾರ್ಗು. ನನ್ನನ್ನ ಬ್ಯಾಂಕಿನ ಸಾಲದ ಋಣದಿಂದ ಮುಕ್ತನನ್ನಾಗಿಸಿದೆ. ಅಪ್ಪನ ಋಣ ತೀರಿಸಿದವನೇ ಮಗ ಅಲ್ಲವೇ?' ಮರು ನುಡಿಯಲು ನನ್ನ ಗಂಟಲು ಕಟ್ಟಿಕೊಂಡಿತ್ತು.


## ಟಿ.ಎಂ. ರಮೇಶ

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ನೆಲೆಸಿರುವ ರಮೇಶ್, ಬ್ಯಾಂಕ್ ಉದ್ಯೋಗದಿಂದ ಸ್ವಯಂನಿವೃತ್ತಿ ಪಡೆದಿದ್ದಾರೆ. 'ಇಂಡಾ', 'ದೃಷ್ಟಿ ಹರಿದಷ್ಟೆ ದೂರ', 'ಕಿಚ್ಚು ಮತ್ತಿತರ ಕತೆಗಳು', 'ಗೋಡೆಕಿಂಡಿ' ಎಂಬ ಕಥಾ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಅವರ ಕಿರುಕಾದಂಬರಿ 'ಭೂತ'. 'ಹುತ್ತಗಟ್ಟಿದೆ ಕವಿತೆ' ಎಂಬುದು ಕವಿತೆಗಳ ಸಂಗ್ರಹವಾಗಿದೆ.